# ಪವಡಿಸು ಪರಮಾತ್ಮನೆ ಸ್ವಾಮಿ ಭವರೋಗ ವೈದ್ಯ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 157.
2. **Ref.:** Samagra Dasa Sahity, Samputa 3.2 published by Kannada & Culture Dept, Govt of Karnataka, Bengaluru, page No. 29.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 402.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 372. Here, the wordings are similar to Ref. 1 except few differences which are not considered.
5. **Note:** The wordings mentioned without highlights are as per Ref. 1. There are few differences in Ref. 2 but is almost similar to Ref. 1. The wordings in Ref. 3 are slightly different and only those words are marked in yellow highlights.
6. **Note:** Singer has followed these lyrics.

ರಾಗ ಮಧ್ಯಮಾವತಿ ತಾಳ ಅಟ

ಪವಡಿಸು ಪರಮಾತ್ಮನೆ ಸ್ವಾಮಿ
ಭವರೋಗ ವೈದ್ಯನೆ ಭಕ್ತರ ಪ್ರಿಯನೆ ॥ ಪ ॥

ಕುಂದಣದಿ ರಚಿಸಿದ ಸೆಜ್ಜೆಯ ಮನೆಯಲಿ
ಇಂದ್ರನೀಲ ಮಣಿ ಮಂಟಪದಿ
ಚಂದ್ರಕಾಂತಿಯ ಠಾಣ ದೀವಿಗೆ ಹೊಳೆಯಲು
ಸಿಂಧು ಶಯನ (ತನಯೆ) ಆನಂದದಿಂದಲಿ ॥ 1 ॥

ತೂಗು ಮಂಚದಿ ಹಂಸತೂಲದ ಹಾಸಿಗೆ
ನಾಗಸಂಪಿಗೆ ಹೂವಿನ ಒರಗು
ಸಾಗರ ಸುತೆಯ ಸಮ್ಮೇಳದಲಿ ನಿಜ
ಭೋಗವ ಪಡುತ ಒಲಾಡುತಿರು ॥ 2 ॥ (ಭೋಗದಿಂದ ಒಲಾಡುತಲಿ)

ಸದ್ದಡಗಿತು (ಗಡಿಯಾರ ಸಾರಿತು ಬೇಗ) (ಗಡಿವಾರ ಸಾಗಿತು ಬೀಗ)
ಮುದ್ರೆಗಳಾಯಿತು ಬಾಗಿಲಿಗೆ
ತಿದ್ದಿದ ಧವಳ ಶಂಖಗಳ ನಾದದಿಂದ (ತಿದ್ದಿದ ಛಾವಣಿ ಶಂಖದ ಘೋಷಣೆ)
ಪದ್ಮನಾಭ ಶ್ರೀ ಪುರಂದರ ವಿಠಲ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪವಡಿಸು** = ಮಲಗು ಸಮೆ

**ಸಜ್ಜೆ** = ಶಯ್ಯಾ, ಹಾಸಿಗೆ

**ತೂಲ** = ಅರಳೆ - ಅರಳೆಯಂತೆ ಮೆತ್ತಗಿನ ತುಪ್ಪಳ

**ಒರಗು** = ದಿಂಬು, ತಕ್ಕೆ

**ನಿಜ ಭೋಗ** = ರತಿ ಸುಖ

**ಕುಂದಣದಿ** – ಬಂಗಾರದ ತಗಡಿನಲ್ಲಿ ಮುತ್ತು ರತ್ನಗಳನ್ನು ಜೋಡಿಸುವುದು ಕುಂದಣದ ಕೆಲಸವೆನಿಸಿಕೊಳ್ಳುತ್ತದೆ.

**ಠಾಣ ದೀವಿಗೆ** – ಸ್ಥಾನ ದೀಪಿಕಾ, ಸಮಯ; ಮನೆ ದೀಪವೂ ಆಗಬಹುದು.

**ಸಿಂಧುತನಯೆ** – ಲಕ್ಷ್ಮಿ.

**ಗಡಿವಾರ** – ಗಡಿಯಾರ; ಗಂಟೆಯನ್ನು ತಿಳಿಸುವ ಸಾಧನ. ಘಟಿಕಾಗಾರ (ಹಿಂದಿನ ಕಾಲದಲ್ಲಿ ಜೋಯಿಸರು ಊರ ಹೆಬ್ಬಾಗಿಲ ಮೇಲಿರುವ ಮನೆಯಲ್ಲಿ (ಘಟಿಕಾಗಾರ) ಗಳಿಗೆ ಬಟ್ಟಲ ಹಾಕಿ, ಪ್ರಹರಕ್ಕೊಮ್ಮೆ ಗಂಟೆ ಬಾರಿಸುತ್ತಿದ್ದರು)

**Classification:** Keerthane
**Ankita:** sri purandara vittala
**Location:** Srirangam, TN
**Category:** Laali Song, Vishnu Stuti, Pooja Tatva
**Sub-Category:** pavadisu, paramatma, shankha, bhava, roga, Vaidya, mane, ananda, hoovu, bhoga, Chandra, srinivasa, hasige, Samudra, chakra, padma, laali, bagilu,
**Pravachana:** NA

**Explanation:** NA